# ಸಾನ್ಯಾ ಮನೋನಂದನ



ಸಾನ್ಯಾ ಮಲ್ಹೋತ್ರಾ ಮುಂಬೈನಲ್ಲಿ. ಅವರ ಕುಟುಂಬದವರು ದೆಹಲಿಯಲ್ಲಿ. ಅವರಿಲ್ಲಿ ಒಂಟಿ. ಕೈತುಂಬಾ ಅಭಿನಯದ ಕೆಲಸಗಳಿದ್ದಾಗ ತಲೆಯಲ್ಲಿ ಅದೇ ಗುಂಗು. ಕೋವಿಡ್ ಎರಡನೇ ಅಲೆ ವ್ಯಾಪಕವಾದಾಗ ಹೊಟ್ಟೆಯಲ್ಲಿ ಎಂಥದೋ ಸಂಕಟ. ಸ್ವಂತ ಊರಿಗೆ ಹೋಗುವಂತಿಲ್ಲ. ಇರುವ ಊರನ್ನೂ ಬಿಡುವಂತಿಲ್ಲ. ಅಲ್ಲಿ ಯಾರೋ ಬಂಧುವಿಗೆ ಕೋವಿಡ್ ಬಂದರೆ ಇಲ್ಲಿ ಅವರು ಕನಲುತ್ತಿದ್ದರು. ಸ್ಪರ್ಶವಿಲ್ಲದ ಸಾಂತ್ವನದಿಂದೇನು ಪ್ರಯೋಜನ ಎಂಬ ಪ್ರಶ್ನೆ ಧುತ್ತೆಂದು ಅವರಿಗೆ ಒಮ್ಮೆ ಎದುರಾಯಿತಂತೆ.

ಕೋವಿಡ್ ಎರಡೂ ಅಲೆಗಳು ಬಂದು ಹೋದಮೇಲೆ ಸಾನ್ಯಾ ಮನದಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಮೊದಲು ಅವರು ವೃತ್ತಿಗೂ ಖಾಸಗಿ ಬದುಕಿಗೂ ನಡುವೆ ಮನದಲ್ಲಿ ಗೋಡೆಯನ್ನೇ ಕಟ್ಟುಕೊಂಡಿರಲಿಲ್ಲ. ಈಗ ಅದನ್ನು ದೊಡ್ಡದಾಗೇ ಕಟ್ಟಿಕೊಂಡಿದ್ದಾರೆ. ಬೆಳಿಗ್ಗೆ 9ರಿಂದ ಸಂಜೆ 5ರವರೆಗಿನ ಕೆಲಸವೆಂದರೆ ತಮಗೂ ಅಲರ್ಜಿ ಇತ್ತೆನ್ನುವ ಕಾರಣಕ್ಕೆ ಸಿನಿಮಾವನ್ನು ಅವರು ವಿಪರೀತ ಹಚ್ಚಿಕೊಂಡಿದ್ದರು. ಕೆಲಸದಲ್ಲಿ ಸಮಯದ ಪರಿವೆ ಇರಕೂಡದು ಎಂದೇ ಭಾವಿಸಿದ್ದರು. ಆದರೆ, ಕೋವಿಡ್ ನಂತರ ಹಾಗಿರುವುದು ಸರಿಯಲ್ಲ ಎಂದು ಅವರಿಗೆ ಅನಿಸಿದೆ. ಕೆಲಸಕ್ಕೂ ಖಾಸಗಿ ಬದುಕಿಗೂ ನಡುವೆ ಅಂತರ ಉಳಿಸಿಕೊಳ್ಳಲೇಬೇಕೆನ್ನುವುದು ಅವರ ಸಂಕಲ್ಪ.

‘ನನ್ನ ಮನಸ್ಸಿನ ಭಾವನೆಗಳನ್ನು ಮೊದಲಿಗೆ ಗೌರವಿಸಬೇಕು. ಕೋವಿಡ್ ಎರಡನೇ ಅಲೆ ಎದ್ದಾಗ ನಾನು ಒಬ್ಬಳೇ ಮಾತನಾಡಿಕೊಳ್ಳುತ್ತಿದ್ದೆ. ಆಗ ಆ ಭಾವಗಳೆಲ್ಲ ಎಷ್ಟು ಜೀವಂತ ಎನಿಸತೊಡಗಿತು. ಅಂಥ ಭಾವಗಳಿಗೆ, ಮನದ ಭಾವನೆಗಳಿಗೆ ನಾವು ಗೌರವ ಕೊಡುವುದು ತುಂಬಾ ಮುಖ್ಯವೆನ್ನಿಸಿತು. ಅದನ್ನು ಮಾಡಲಾರಂಭಿಸಿರುವೆ’ ಎಂದು ಅವರು ಸಂದರ್ಶನವೊಂದರಲ್ಲಿ ಹೇಳಿಕೊಂಡಿದ್ದಾರೆ.

‘ದಂಗಲ್’ ಹಿಂದಿ ಚಿತ್ರದ ಮೂಲಕ ಪ್ರವರ್ಧಮಾನಕ್ಕೆ ಬಂದ ಸಾನ್ಯಾ, ಆಮೇಲೆ ‘ಲೂಡೊ’, ‘ಬಧಾಯಿ ಹೋ’, ‘ಶಕುಂತಲಾದೇವಿ’ ಹಿಂದಿ ಚಿತ್ರಗಳಲ್ಲಿಯೂ ಅಭಿನಯಿಸಿದ್ದರು. ‘ಪಗ್ಲೈಟ್’ ಹಿಂದಿ ಸಿನಿಮಾದಲ್ಲಿ ಅವರು ಚಿಕ್ಕ ವಯಸ್ಸಿಗೇ ವಿಧವೆಯಾಗುವ ಹೆಣ್ಣಿನ ಪಾತ್ರದಲ್ಲಿ ನಟಿಸಿದ್ದಾರೆ. ಬಾಬಿ ದೇವಲ್ ಹಾಗೂ ವಿಕ್ರಂ ಮಾಸ್ಸೆ ಜತೆಯಲ್ಲಿ ‘ಲವ್ ಹಾಸ್ಟೆಲ್’ ಚಿತ್ರದಲ್ಲೂ ಅಭಿನಯಿಸಿದ್ದಾರೆ.

ಎಲ್ಲಾ ನೆಗೆಟಿವ್ ಸಂಗತಿಗಳನ್ನು ಮನದಿಂದ ತೊಡೆದುಹಾಕಿ, ದಿನವೂ ಹೊಸತೇ ಜನ್ಮ ಎನ್ನುವಂತೆ ಬದುಕಬೇಕು ಎಂದು ನಿರ್ಧರಿಸಿರುವ ಸಾನ್ಯಾ, ಇದನ್ನು ತಮ್ಮ ಅಧ್ಯಾತ್ಮ ಎಂದೂ ಬಣ್ಣಿಸಿದ್ದಾರೆ.

# ಸಲ್ಲು ನಿರಾಕರಿಸಿದ ಹಿಟ್ ಚಿತ್ರಗಳು



ಸಲ್ಮಾನ್ ಖಾನ್ ನಿರಾಕರಿಸಿದ ಹಿಂದಿ ಚಿತ್ರಗಳು ದೊಡ್ಡ ಹಿಟ್ ಆಗಿರುವುದನ್ನು ಪದೇಪದೇ ಅನೇಕರು ಮೆಲುಕು ಹಾಕುತ್ತಿರುತ್ತಾರೆ. ಖುದ್ದು ಸಲ್ಮಾನ್ ಕೆಲವು ಸಂದರ್ಶನಗಳಲ್ಲಿ ತಾವು ಅಂತಹ ಚಿತ್ರಗಳನ್ನು ನಿರಾಕರಿಸಿದ್ದು ಏಕೆ ಎಂದು ಹೇಳಿಕೊಂಡಿರುವುದೂ ಇದೆ.

ಸಲ್ಮಾನ್ ಒಲ್ಲೆ ಎಂದಿದ್ದ ಪ್ರಮುಖ ಚಿತ್ರ ‘ಬಾಜಿಗರ್’. ಅಬ್ಬಾಸ್–ಮಸ್ತಾನ್ ನಿರ್ದೇಶಕ ಜೋಡಿ ಅವರಲ್ಲಿಗೆ ಹೋಗಿ ಚಿತ್ರದ ನೆಗೆಟಿವ್ ಪಾತ್ರದ ಪ್ರಾಮುಖ್ಯದ ಕುರಿತು ಹೇಳಿತು. ಸಲ್ಮಾನ್ ತಮ್ಮ ತಂದೆಯ ಸಲಹೆ ಕೇಳಿದರು. ಆ ಚಿತ್ರಕಥೆಯಲ್ಲಿ ತಾಯಿಯ ಭಾವನಾತ್ಮಕ ದೃಶ್ಯಗಳನ್ನು ಸೇರಿಸಿದರೆ ಪಾತ್ರದ ನೆಗೆಟಿವ್ ಶೇಡ್‌ಗೆ ಒಂದು ತರ್ಕ ಸಿಗುತ್ತದೆ ಎಂದು ಸಲ್ಮಾನ್ ತಂದೆ ಹೇಳಿದರು. ಆದರೆ, ನಿರ್ದೇಶಕರು ಆ ಬದಲಾವಣೆ ಮಾಡಲು ಒಪ್ಪದೆ ಹೊರಟಿದ್ದರು. ಆಮೇಲೆ ಶಾರುಖ್ ಖಾನ್ ವೃತ್ತಿ ಬದುಕಿಗೆ ಅದೇ ಸಿನಿಮಾ ದೊಡ್ಡ ತಿರುವು ನೀಡಿತು. ಅದರಲ್ಲಿ ತಾಯಿ ಸೆಂಟಿಮೆಂಟ್ ಕೂಡ ಸೇರ್ಪಡೆಯಾಗಿತ್ತು!

‘ಚಕ್ ದೆ ಇಂಡಿಯಾ’ ಹಿಂದಿ ಸಿನಿಮಾದಲ್ಲಿ ನಟಿಸುವಂತೆ ಮೊದಲು ಸಲ್ಮಾನ್ ಖಾನ್ ಅವರನ್ನೇ ಕೇಳಲಾಗಿತ್ತು. ಬೇರೆ ಬೇರೆ ದೇಶಗಳಲ್ಲಿ ತಮ್ಮ ಅಭಿಮಾನಿಗಳು ಇರುವುದರಿಂದ ‘ಚಕ್ ದೆ ಇಂಡಿಯಾ’ ಎಂಬ ಶೀರ್ಷಿಕೆ ಸರಿಹೋಗುತ್ತಿಲ್ಲ ಎಂದಿದ್ದರು. ಆಮೇಲೆ ಆ ಚಿತ್ರದಲ್ಲೂ ಶಾರುಖ್ ನಟಿಸಿ, ಅದು ಹಿಟ್ ಆದದ್ದನ್ನು ಕಂಡೆವು.

ಕೆಲವು ಮೂಲಗಳ ಪ್ರಕಾರ ‘ದಿಲ್‌ವಾಲೆ ದುಲ್ಹನಿಯಾ ಲೇ ಜಾಯೆಂಗೆ’, ‘ಗಜಿನಿ’, ‘ಕಲ್ ಹೋ ನಾಹೋ’ ಈ ಚಿತ್ರಗಳಲ್ಲಿ ಅಭಿನಯಿಸುವಂತೆ ಸಲ್ಮಾನ್ ಅವರನ್ನೇ ಮೊದಲು ಕೇಳಲಾಗಿತ್ತಂತೆ. ಆಮೇಲೆ ಆ ಚಿತ್ರಗಳಲ್ಲಿ ಶಾರುಖ್ ಖಾನ್, ಅಮೀರ್ ಖಾನ್, ಸೈಫ್ ಅಲಿ ಖಾನ್ ಮಿಂಚಿದ್ದನ್ನು ಕಂಡೆವು.

■ ವಿಶಾಖ ಎನ್.